**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.**

ಫಿರ್ಯಾದುದಾರರು : ಸರ್ಕಾರದ ಪರವಾಗಿ
ಮಹಾಲಿಂಗಪೂರ ಪೋಲಿಸ ಠಾಣೆ

ಆರೋಪಿ : 1) ಹಸನ ಇಮಾಮಸಾಬ ಹಂಗರಗಿ,
ವಯಾಃ 21 ವರ್ಷ, ಉಃ ಒಕ್ಕಲುತನ,
ವಾಸಃ ಡವಳೇಶ್ವರ ಗ್ರಾಮ, ತಾಃ ಮುಧೋಳ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಅಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ - 1) ಅಭಿಯೋಜನೆ ಪರ ಕೊಟ್ಟಂತಹ ಸಾಕ್ಷ್ಯಗಳು ಕೇಳಿದ್ದೀರಾ?

ಆರೋಪಿಯ ಉತ್ತರ - ಕೇಳಿದೇನೆ.

ಪ್ರಶ್ನೆ - 2) ಅಸಾ-3 ವಿಠ್ಠಲ ಬರಮಪ್ಪ ಜೋಗನ್ನವರ, ಪೇದೆ, ಮಹಾಲಿಂಗಪೂರ ಪೋಲಿಸ್ ಠಾಣೆ, ಇವರು ತಮ್ಮ ಸಾಕ್ಷಿಯಲ್ಲಿ, ದಿಃ 14-04-2018 ರಂದು ಬೆಳಿಗ್ಗೆ 11-00 ಗಂಟೆಗೆ ನಾನು ಮತ್ತು ಚಾಸಾ-4 ರವರು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಡವಳೇಶ್ವರ ಗ್ರಾಮದ ಹೈಸ್ಕೂಲ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದ ವಿಷಯ ತಿಳಿಸಿ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ನನಗೆ ನಿರ್ದೇಶನ ನೀಡಿದ ಮೇರೆಗೆ ನಾನು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಠಾಣೆಗೆ ಬಂದಿದ್ದು, ನಂತರ ಬಾತ್ಮಿ ವಿಷಯವನ್ನು ಚಾಸಾ-1 ರವರು ಸದರಿಯವರಿಗೆ ತಿಳಿಸಿ ಪಂಚರಾಗಿ ಸಹಕರಿಸುವಂತೆ ತಿಳಿಸಿದ್ದು, ಸದರಿವರು ಒಪ್ಪಿದ್ದು, ನಂತರ ಅದರಂತೆ ನಾವೆಲ್ಲರೂ ಸೇರಿ ಬೆಳಿಗ್ಗೆ 11-45 ಗಂಟೆಗೆ ಸುಮಾರಿಗೆ ನಮ್ಮ ಕಚೇರಿಯಿಂದ ಸರ್ಕಾರಿ ವಾಹನ ನಂ-ಕೆಎ-29/ಜಿ-366 ರಲ್ಲಿ ಕಚೇರಿಯಿಂದ ಹೊರಟು ಮದ್ಯಾಹ್ನ 12-00 ರ ಸುಮಾರಿಗೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ವಾಚ್ ಮಾಡಿದಾಗ, ಅಲ್ಲಿರುವ ಹೈಸ್ಕೂಲ ಮುಂದಿನ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಸಾರಾಯಿ ಮಾರಾಟ ಮಾಡಿ ಹಣವನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಖಚಿತ ಪಡಿಸಿಕೊಂಡು ಚಾಸಾ-1 ರವರು ರೇಡ ಮಾಡಿದ್ದು ಸದರಿ ವ್ಯಕ್ತಿಯನ್ನು ಹಿಡಿದಿದ್ದು, ಆತನಿಂದ ಸಾರಾಯಿ ತೆಗೆದುಕೊಳ್ಳುತ್ತಿದ್ದ ಜನರು ಓಡಿ ಹೋಗಿದ್ದು, ನಂತರ ಚಾಸಾ-1 ರವರು ಸದರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವರು ಹಸನ ಇಮಾಮಸಾಬ ಹಂಗರಗಿ ಅಂತಾ ಹೇಳಿದ್ದು ಪರವಾಣಿಗೆ ಕುರಿತು ವಿಚಾರಣೆ ಮಾಡಿದಾಗ ಯಾವುದೇ ಪರವಾಣಿಗೆ ಇರುವದಿಲ್ಲ ಎಂದು ಹೇಳಿರುತ್ತಾರೆ. ಆರೋಪಿಯನ್ನು ಪರಿಶೀಲಿಸಲಾಗಿ, ಒಂದು ರಟ್ಟಿನ ಬಾಕ್ಸನಿಂದ 180 ಎಂ ಎಲ್ ನ ಬ್ಯಾಗ್ ಪೈಪರ್ ರಮ್ ವಿಸ್ಕಿಯ 30 ಪೌಚಗಳು ದೊರೆತಿದ್ದು, ಅವುಗಳಲ್ಲಿ ಒಂದು

ಪೌಚನ್ನು ರಾಸಾಯನಿಕ ಪರೀಕ್ಷೆ ಕುರಿತು ಸ್ಯಾಂಪಲ್ ಅಂತಾ ತೆಗೆದುಕೊಂಡಿದ್ದು, ಆರೋಪಿಯ ಅಂಗ ಜಪ್ತಿ ಮಾಡಿದಾಗ ಆತನಿಂದ ರೂ 120 ಸಿಕ್ಕಿದ್ದು, ಪಂಚನಾಮೆಯನ್ನು ಮಧ್ಯಾಹ್ನ 12-15 ರಿಂದ 01-15 ಮಾಡಿದ್ದು, ಈ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾದಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿಯ ಉತ್ತರ -

ಪ್ರಶ್ನೆ - 3) ಅಸಾ-4 ಸಿದ್ದಪ್ಪ ತಂ॥ ಬಲವಂತಪ್ಪ ಹಿರೇಕುರುಬರ, ಇವರು ತಮ್ಮ ಸಾಕ್ಷಿಯಲ್ಲಿ, ದಿನಾಂಕ 14-04-2018 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಸಾರಾಯಿ ರೇಡ ಮಾಡಿಕೊಂಡು ಪಂಚನಾಮೆ, ಮೂ ಮಾ ಗಳು ಮತ್ತು ಆರೋಪಿ ಸಹಿತ ಠಾಣೆಗೆ ಬಂದು ಲಿಖಿತ ಫಿರ್ಯಾದಿಯನ್ನು ಮಧ್ಯಾಹ್ನ 01-45 ಗಂಟೆಗೆ ಸಲ್ಲಿಸಿದ್ದು, ಅದರಂತೆ ನಾನು ನಮ್ಮ ಠಾಣಾ ಗುನ್ನೆ ನಂಬರ 72/2018 ರಂತೆ ಪ್ರಕರಣವನ್ನು ದಾಖಲ ಮಾಡಿಕೊಂಡು ಪ್ರ ವ ವ ವನ್ನು ತಯಾರಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು, ನಂತರ ಆರೋಪಿಯನ್ನು ದಸ್ತಗೀರ ನಿಯಮ ಪಾಲಿಸಿ ಮಾನ್ಯ ನ್ಯಾಯಾಲಯಕ್ಕೆ ಸೂಕ್ತ ಬೆಂಗಾವಲಿನೊಂದಿಗೆ ಹಾಜರು ಪಡಿಸಿದ್ದು, ಅದೇ ದಿನ ಚಾಸಾ- 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ದಿನಾಂಕ 19-05-2018 ರಂದು ಜಪ್ತಾದ ಮೂ ಮಾ ಗಳನ್ನು ಪರೀಕ್ಷೆಗಾಗಿ ಎಫ್ ಎಸ್ ಎಲ್ ಬೆಳಗಾವಿಗೆ ಚಾಸಾ- 5 ರವರ ಮೂಲಕ ಕಳುಹಿಸಿದ್ದು, ಅವರಿಂದ ಸ್ವೀಕೃತ ಪ್ರತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ದಿನಾಂಕ 02-08-2018 ರಂದು ಎಫ್ ಎಸ್ ಎಲ್ ಬೆಳಗಾವಿ ಇವರಿಂದ ಬಂದ ವರದಿಯನ್ನು ಪಡೆದುಕೊಂಡಿದ್ದು, ದಿನಾಂಕ 22-08-2018 ರಂದು ಆರೋಪಿಯ ಮೇಲೆ ಸಾಕ್ಷಿ ಪುರಾವೆಗಳು ಕಂಡು ಬಂದಿದ್ದರಿಂದ ಆತನ ಮೇಲೆ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿಯ ಉತ್ತರ -

ಪ್ರಶ್ನೆ - 4) ಅಸಾ-1 ರವಿಕುಮಾರ ತಂ॥ ಲಕ್ಕಪ್ಪ ಧರ್ಮಟ್ಟಿ, ಇವರು ತಮ್ಮ ಸಾಕ್ಷಿಯಲ್ಲಿ, ದಿನಾಂಕಃ 14-04-2018 ರಂದು ಬೆಳಿಗ್ಗೆ 11 ಗಂಟೆಗೆ ಧವಳೇಶ್ವರ ಗ್ರಾಮದ ಹೈಸ್ಕೂಲ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯ ಮಾರಾಟ ಮಾಡುತ್ತಿದ್ದ ಕುರಿತು ಬಾತ್ಮಿ ಬಂದಿದ್ದು , ಚಾಸಾ-4 ಮತ್ತು 5 ರವರನ್ನು ಕರೆಸಿ ಬಾತ್ಮಿ ವಿಷಯ ತಿಳಿಸಿ, ಚಾಸಾ-5 ರವರ ಮುಖಾಂತರ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿ, ಪಂಚರಾಗಲು ಕೇಳಿಕೊಂಡಾಗ

ಪಂಚರಾಗಲು ಒಪ್ಪಿದ್ದು, ನಂತರ ನಾವೆಲ್ಲರೂ ಸರಕಾರಿ ವಾಹನದಲ್ಲಿಸಂಖ್ಯೆ: KA-29-366 ನೇದ್ದರಲ್ಲಿ ಠಾಣೆಯಿಂದ 11.45 ಕ್ಕೆ ಹೊರಟು 12 ಸುಮಾರಿಗೆ ಬಾತ್ಮಿ ಬಂದ ಸ್ಥಳದ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ವಾಚ್ ಮಾಡಿ ನೋಡಲಾಗಿ, ಶಾಲೆಯ ಮುಂದಗಡೆ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದನ್ನು ಖಚಿತ ಪಡಿಸಿಕೊಂಡು ಸಿಬ್ಬಂದಿಯೊಂದಗೆ ಅವನ ಮೇಲೆ ದಾಳಿ ಮಾಡಿ ಅವನನ್ನು ವಶಕ್ಕೆ ಪಡಿಸಿಕೊಂಡು, ಆತನನ್ನು ವಿಚಾರಿಸಲಾಗಿ ಆತನ ಹೆಸರು ಹಸನ್ ಹಂಗರಗಿ ಸಾ. ಢವಳೇಶ್ವರ ಅಂತ ತಿಳಿಸಿದ್ದು, ಹಾಗೂ ಪರಿಶೀಲಿಸಲಾಗಿ ಆತನ ಪ್ಲ್ಯಾಸ್ಟಿಕ್ ಚೀಲದಲ್ಲಿ 180 ಎಂ ಎಲ್ನ 30 ಬ್ಯಾಗ್ ಪ್ಯಾಪರ್ ರಮ್ ಪೌಚುಗಳಿದ್ದು, ಅದರಲ್ಲಿ ಒಂದು ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಪಂಚರ ಸಹಿ ಪಡೆದ ಚೀಟಿಯನ್ನು ಅಂಟಿಸಿದ್ದು, ಸದರಿ ವ್ಯಕ್ತಿಯ ಅಂಗಶೋಧನೆ ಮಾಡಿ ಆತನ ಶರ್ಟ್ ಕೀಸೆಯಲ್ಲಿ 120 ರೂಪಾಯಿ ಇತ್ತು. ಸದರಿ ಪಂಚರ ಸಮಕ್ಷಮ ಮೊತ್ತವನ್ನು ಜಪ್ತು ಪಡಿಸಿಕೊಂಡು , ಸ್ಥಳದಲ್ಲಿ ಮಧ್ಯಾಹ್ನ 12.15 ರಿಂದ 1.15 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಪಂಚನಾಮೆ, ಮುದ್ದೆ ಮಾಲು ಮತ್ತು ಆರೋಪಿತನ ಕಛೇರಿಗೆ ಬಂದು ಸರಕಾರಿ ತರ್ಫೆ ಫಿರ್ಯಾದಿಯನ್ನು ಚಾಸಾ-7 ರವರಿಗೆ ನೀಡಿದ್ದು, ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿಯ ಉತ್ತರ - ಸುಳ್ಳು

ಪ್ರಶ್ನೆ -5) ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುವುದು ಇದೆಯಾ ?

ಆರೋಪಿಯ ಉತ್ತರ - ಇಲ್ಲ

ಪ್ರಶ್ನೆ-6) ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇದೆಯಾ?

ಆರೋಪಿಯ ಉತ್ತರ - ಇಲ್ಲ

ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

29/1/26

ಸ್ಥಳ: ಬನಹಟ್ಟಿ
ದಿನಾಂಕ: 29.01.2026

ಪ್ರ. ದ. ನ್ಯಾ.. ದಂಡಾಧಿಕಾರಿಗಳು,
ಬನಹಟ್ಟಿ .